

ವಿಜ್ಞಾನವಾದರೂ ಎಲ್ಲಿ ಹುಟ್ಟಿದೆ? ಜಗತ್ತಿನ ಧರ್ಮಗಳಲ್ಲಿ, ದೇವರುಗಳು ದೇವದೂತರು ಆಕಾಶವಾಸಿ ಆಗಿರುವುದು ಆಕಸ್ಮಿಕವಲ್ಲ. ಚರ್ಚುಗಳ ಛಾವಣಿ, ಗೋಡೆ, ಜಾಲಂಧ್ರಗಳು ರೆಕ್ಕೆಯುಳ್ಳ ದೇವದೂತರ ಚಿತ್ರಗಳಿಂದ ತುಂಬಿಹೋಗಿವೆ. ಗುಡ್ಡಬೆಟ್ಟಗಳ ಶಿಖರಗಳು ಗುಡಿ–ವಿಹಾರಗಳ ಕಿರೀಟವನ್ನು ಹೊತ್ತುಕೊಂಡಿವೆ. ಚೀನಾದಲ್ಲಿ ಕೆಲವು ವಿಹಾರಗಳು ಕಂಬದಂತೆ ಲಂಬವಾಗಿರುವ ಬಂಡೆಗಳ ನೆತ್ತಿಯಲ್ಲಿದ್ದು, ದಿನವೂ ಮೋಡಗಳ ಜೊತೆ ಆಟವಾಡುತ್ತವೆ. ಶಿವನು ಕೈಲಾಸ ಪರ್ವತದಲ್ಲಿರುವಂತೆ, ಗ್ರೀಕ್ ದೇವತೆಗಳೂ ಒಲಂಪಸ್ ಪರ್ವತವಾಸಿಗಳೇ. ನೆಲದಲ್ಲಿ ಇಲ್ಲದ್ದು ಮುಗಿಲ ಜಗತ್ತಿನಲ್ಲಿ ಸಿಗುತ್ತದೆಯೆಂಬ ಆಶಯವು, ಚಾರಣಕ್ಕೆ ಮನುಷ್ಯರು ಹುಡುಕಿಕೊಂಡ ಉಪಾಯವೂ ಇದ್ದೀತು.

ವೈರುಧ್ಯವೆಂದರೆ, ದೇವರ ದರ್ಶನಕ್ಕೆ ಮನುಷ್ಯರು ಮುಗಿಲಿನತ್ತ ಚಲಿಸಿದರೆ, ಮುಗಿಲ ಮೇಲಿನ ದೇವತೆಗಳು, ಇಹದ ನರರನ್ನು ಪ್ರೀತಿಸಲು, ಕೆಡಿಸಲು, ಉದ್ಧರಿಸಲು ಇಳೆಗೆ ಇಳಿವುದು. ಮಹಾ'ಯಾನ'ದ ಪ್ರಕಾರ, ಲೋಕದ ದುಃಖನಿವಾರಣ ಕಾರ್ಯವು ಸಂಪನ್ನಗೊಂಡಿತು ಎಂದು ಪ್ರಾಣಬಿಡಲು ತಯಾರಾದ ಬುದ್ಧ, ಪರ್ವತದ ತುದಿಗೇರಿ ನಿಲ್ಲುತ್ತಾನೆ. ಇನ್ನೇನು ಪ್ರಾಣೋತ್ಕ್ರಮಣ ಆಗಬೇಕು, ಅಷ್ಟರಲ್ಲಿ ಎಲ್ಲೋ ಕೆಳಗೆ ಕಣಿವೆಯಲ್ಲಿ ನರಳುವ ಆರ್ತದನಿ ಕೇಳಿಸುತ್ತದೆ. ಆಗ 'ಓಹೋ! ನನ್ನ ಕೆಲಸವಿನ್ನೂ ಮುಗಿದಿಲ್ಲ'ವೆಂದು, ಬೋಧಿಸತ್ವನ ವಿವಿಧ ಅವತಾರಗಳಲ್ಲಿ ಭೂಮಿಗೆ ಅವತರಿಸಲು ನಿರ್ಧರಿಸುತ್ತಾನೆ. ದುಷ್ಟರ ಸಂಹಾರಕ್ಕೆ ಮರ್ತ್ಯಕ್ಕೆ ಕೂಡಲೇ ಬರಬೇಕು ಎಂಬ ಭೂಮಿಗರ ಒತ್ತಾಯಕ್ಕೆ ಸಂಭವಿಸುವ ಅವತಾರಕ್ಕಿಂತ, ಬುದ್ಧನ ಅವತರಣ ತುಸು ಅಲಾಯಿದ. ನಂದಿಯ ಮೇಲೆ ಆರೂಢರಾಗಿ ಲೋಕವಿಹಾರ ಮಾಡುವ ಶಿವಪಾರ್ವತಿಯರನ್ನು ನೋಡಿ. ಅವರು ಅಣ್ಣಂದಿರು ಪಯಣದಲ್ಲಿ ಬಿಟ್ಟುಹೋದ ಕುಂಟ ತಮ್ಮನ ಗೋಳುಕರೆಯನ್ನು ಕೇಳಿ ಭೂಮಿಗೆ ಇಳಿಯುವರು. ಭಗೀರಥನು ಪಾತಾಳದಲ್ಲಿ ಸಿಕ್ಕು ತಪಿಸುತ್ತಿದ್ದ ಪಿತೃಗಳ